International Journal of Kannada Research 2018; 4(3): 122-126

International Journal of Kannada Research
www.kannadajournal.com




**ISSN: 2454–5813**
IJKR 2018; 4(3): 122-126
© 2018 IJKR
www.kannadajournal.com
Received: 21-05-2018
Accepted: 22-06-2018

**ಡಾ.ಜನಾರ್ದನ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ– ೫೮೩೨೭೬,
ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

**Correspondence**
**ಡಾ.ಜನಾರ್ದನ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ– ೫೮೩೨೭೬,
ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

# ಭಾರತದ ವಿಶೇಷ ಆರ್ಥಿಕ ವಲಯ: ವಾಸ್ತವ ಮತ್ತು ದೃಷ್ಟಿಕೋನ

**ಡಾ.ಜನಾರ್ದನ**

ಅಭಿವೃದ್ಧಿ ಹೆಸರಲ್ಲಿ ರಾಷ್ಟ್ರಮಟ್ಟದಲ್ಲಿ ಮತ್ತು ರಾಜ್ಯದಲ್ಲಿ ಅನೇಕ ಹೊಸಹೊಸ ಕಾರ್ಯಯೋಜನೆಗಳು ಜಾರಿಗೆ ಬಂದಿವೆ. ಆ ಮೂಲಕ ಸಾಕಷ್ಟು ಹಣಕಾಸು ಹೊರಗಿನಿಂದ ಹೂಡಿಕೆಯಾಗಿದೆ. ೯೦ರ ದಶಕದ ನಂತರ ಅಂದರೆ ಉದಾರೀಕರಣದಿಂದ ಈ ರೀತಿಯ ಪ್ರಕ್ರಿಯೆಗಳಿಗೆ ಹೆಚ್ಚು ಪ್ರೋತ್ಸಾಹ ದೊರೆತಿದೆ. ಇದರಿಂದ ಕೆಲವರಿಗೆ ಉದ್ಯೋಗ ಲಭಿಸಿದೆ. ಕೆಲವು ಪ್ರದೇಶಗಳಿಗೆ ಅನುಕೂಲಗಳೂ ಸಹ ಆಗಿದೆ. ಅದರ ಜೊತೆಗೆ ಸಾಕಷ್ಟು ಅನಾನುಕೂಲಗಳು ಕೂಡ ಆಗುತ್ತಿವೆ. ಇದೇ ಅಭಿವೃದ್ಧಿ ಹೆಸರಲ್ಲಿ ೨೦೦೬ ರಿಂದ ನಮ್ಮ ದೇಶದಲ್ಲಿ ವಿಶೇಷ ಆರ್ಥಿಕ ವಲಯ(ಎಸ್.ಇ.ಝಡ್) ಆರಂಬವೆ. ಈ ವಿಶೇಷ ಆರ್ಥಿಕ ವಲಯ ಆರಂಭಿಸಿದ ರೀತಿ ಮತ್ತು ಅದರ ಚಾರಿತ್ರಿಕ ವಿಚಾರಗಳನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

ಭಾರತಕ್ಕೆ ಸ್ವಾತಂತ್ರ್ಯ ಬಂದು ೭೧ವರ್ಷಗಳು ಗತಿಸಿವೆ. ಈ ೭೧ವರ್ಷಗಳಲ್ಲಿ ಭಾರತ ಸಾಧಿಸಿರುವ ಅಭಿವೃದ್ಧಿ ಹಲವು ರೀತಿಯದು. ಈ ಅಭಿವೃದ್ಧಿಯು ದೇಶದಾದ್ಯಂತ ಏಕಮುಖವಾಗಿಲ್ಲ. ಅದು ಒಂದು ಪ್ರದೇಶದಕ್ಕೆ ಹೆಚ್ಚು ಒತ್ತು ನೀಡಿರುವುದು ಮತ್ತೊಂದು ಪ್ರದೇಶವನ್ನು ನಿರ್ಲಕ್ಷಿಸಿರುವುದು ಕಂಡು ಬರುತ್ತದೆ. ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶ ಎಂದು ಇಬ್ಭಾಗಿಸಿ ನೋಡಿದರೆ ನಗರ ಪ್ರದೇಶಕ್ಕೆ ಹೆಚ್ಚು ಪ್ರಾಶಸ್ತ್ಯ ಸಿಕ್ಕಿ ಗ್ರಾಮೀಣ ಪ್ರದೇಶವನ್ನು ನಿರ್ಲಕ್ಷ್ಯ ಮಾಡಲಾಗಿದೆ. ಸ್ವಾತಂತ್ರ್ಯ ಬಂದು ೭೧ವರ್ಷಗಳು ಕಳೆದರೂ ಜನರಿಗೆ ಶುದ್ಧ ಕುಡಿಯುವ ನೀರಿನ ಕೊರತೆ, ವಸತಿ ಕೊರತೆ, ಉದ್ಯೋಗದ ಕೊರತೆ, ವಿದ್ಯುತ್ ಕೊರತೆ, ಆರೋಗ್ಯ ಸೌಲಭ್ಯಗಳ ಕೊರತೆ, ಮಾರುಕಟ್ಟೆ ಕೊರತೆ, ಸಾರಿಗೆ ಸೌಲಭ್ಯದ ಕೊರತೆ ಮುಂತಾದ ಮೂಲಭೂತ ಸೌಲಭ್ಯಗಳ ಕೊರತೆ ಎದ್ದು ಕಾಣುತ್ತದೆ. ಈ ಮೇಲಿನ ಕೊರತೆಗಳು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸದಿಂದ ಕೂಡಿರುವುದು ಕಂಡುಬರುತ್ತದೆ. ಅಂದರೆ ಮಹಾನಗರಗಳಲ್ಲಿ ಅತ್ಯಂತ ಹೆಚ್ಚು ಸೌಲಭ್ಯಗಳು ಕೇಂದ್ರೀಕರಣ ಗೊಂಡಿವೆ ಮತ್ತು ಈ ಪ್ರದೇಶಗಳು ಏಕಮುಖವಾಗಿ ಅಭಿವೃದ್ಧಿಯನ್ನು ಸಾಧಿಸುತ್ತಾ ಹೋಗುತ್ತಿವೆ. ಇದಕ್ಕೆ ಹಲವಾರು ಕಾರಣಗಳಿರಬಹುದು. ಅಂದರೆ ನಾವು ಅಭಿವೃದ್ಧಿಯ ದ್ವೀಪಗಳನ್ನು ಸೃಷ್ಟಿಸುತ್ತಿದ್ದೇವೆ. ಅಂದರೆ ವಿಶಾಲ ಸಮುದ್ರದ ಮದ್ಯದಲ್ಲಿ ಒಂದು ಚಿಕ್ಕ ಭೂಭಾಗ ಮಾತ್ರ ಕಂಗೊಳಿಸುವಂತೆ ಆಗಿದೆ. ಉಳಿದ ಪ್ರದೇಶ ಬರೀ ಕತ್ತಲು ಆವರಿಸಿದಂತೆ. ಅಭಿವೃದ್ಧಿ ಅಂದರೆ ಇಡೀ ದೇಶವೇ ಅಭಿವೃದ್ಧಿಯಾಗಬೇಕು. ಪ್ರತಿ ಹಳ್ಳಿಯೂ ಅಭಿವೃದ್ಧಿಯಾಗಬೇಕು. ಪ್ರತಿಯೊಬ್ಬ ವ್ಯಕ್ತಿಯೂ ಅಭಿವೃದ್ಧಿಯಲ್ಲಿ ಪಾಲುದಾರನಾಗಬೇಕು. ಇದನ್ನು ಎಲ್ಲರನ್ನು ಒಳಗೊಳ್ಳುವ (ಇನ್‌ಕ್ಲುಸಿವ್ ಗ್ರೋತ್) ಎಂದು ಕರೆಯುತ್ತಾರೆ. ನಿಜವಾಗಿ ಆಗಬೇಕಾಗಿರುವುದು ಎಲ್ಲರನ್ನು ಒಳಗೊಳ್ಳುವ ಅಭಿವೃದ್ಧಿ. ಅದನ್ನು ಬಿಟ್ಟು ಅಭಿವೃದ್ಧಿಯ ದ್ವೀಪಗಳನ್ನು ನಿರ್ಮಾಣ ಮಾಡುವುದು ಸರಿಯಲ್ಲ. ಈ ವಿಶೇಷ ಆರ್ಥಿಕ ವಲಯ ಅನ್ನುವುದು ಆ ರೀತಿಯ ಅಭಿವೃದ್ಧಿಯ ದ್ವೀಪಗಳು. ಯಾಕೆ ಈ ವಿಶೇಷ ಆರ್ಥಿಕ ವಲಯಗಳನ್ನ ಮಾಡಿದರು ಅನ್ನುವ ಹಿನ್ನೆಲೆಯನ್ನು ನೋಡಿದರೆ ನಮಗೆ ಇದರ ವಿಷಯ ಅರ್ಥವಾಗುತ್ತದೆ.

೧೯೮೦ರ ಸುಮಾರಿನಲ್ಲಿ ಚೀನಾ ದೇಶದಲ್ಲಿ ಆಗ ಅಲ್ಲಿಯ ಪ್ರಧಾನಿ ಡೆನ್ಸಿಯಾ ಒಪಿನ್ ಅವರಿಗೆ ಬಹಳ ನಿಖರವಾಗಿ ಅನ್ನಿಸಿತ್ತು– ಈ ಕಮ್ಯುನಿಷ್ಟ್ ನಿಯಮವನ್ನೇ ನಾವು ನಂಬಿಕೊಂಡಿದ್ದರೆ ಈ ದೇಶಕ್ಕೆ ಮುಂದಿನ ದಿನಗಳಲ್ಲಿ ಭವಿಷ್ಯವಿಲ್ಲ. ಪ್ರವೇಟ್ ಎಂಟರ್ ಪ್ರೈಸೆಸ್ ಅಂಡ್ ಪ್ರವೇಟ್ ಸೆಕ್ಟರ್‌ಗೆ ಪ್ರೋತ್ಸಾಹ ಮಾಡಲೇಬೇಕು. ಅಂತಾರಾಷ್ಟ್ರೀಯ ಆರ್ಥಿಕತೆಗೆ ನಾವು ತರೆದುಕೊಳ್ಳಲೇಬೇಕು. ಆಗ ಮಾತ್ರ ನಮ್ಮ ದೇಶ ಪ್ರಗತಿ ಸಾಧಿಸಲು ಸಾಧ್ಯವೆಂದು ಅವರು ದೃಢವಾಗಿ ನಂಬಿದ್ದರು. ಅಂದರೆ ಚೀನಾ ಅಷ್ಟು ವರ್ಷಗಳ ಕಮ್ಯೂನಿಸಂ ಆಡಳಿತದಲ್ಲಿ ಖಾಸಗಿ ಬಂಡವಾಳವನ್ನು ಸಂಪೂರ್ಣವಾಗಿ ನಿಷಿದ್ಧಮಾಡಿತ್ತು. ಖಾಸಗಿತನಕ್ಕೆ ಪ್ರೋತ್ಸಾಹವಾಗಲೀ, ಖಾಸಗಿ ಬಂಡವಾಳಕ್ಕೆ ಪ್ರೋತ್ಸಾಹವಾಗಲೀ ಇರಲಿಲ್ಲ.

ಈ ಸನ್ನಿವೇಶದಲ್ಲಿ ಆ ದೇಶದಲ್ಲಿ ಖಾಸಗಿ ವಲಯವನ್ನು ಪ್ರೋತ್ಸಾಯಿಸುವುದು ಹೇಗೆ? ಅದನ್ನು ಸಾದ್ಯಮಾಡುವುದು ಹೇಗೆ? ಅನ್ನುವುದರ ಬಗ್ಗೆ ಅಲ್ಲಿಯ ಪ್ರಧಾನಿಯವರು ತಲೆಕೆಡಿಸಿಕೊಂಡಿದ್ದರು. ಇದಕ್ಕೆ ಅಲ್ಲಿಯ ಚೀನಾದ ಕಾನೂನುಗಳೂ ಕೂಡ ಅದಕ್ಕೆ ಅನುಕೂಲಕರವಾಗಿರಲಿಲ್ಲ. ಆಗ ಅವರು ಅಲ್ಲಿಯ ಪ್ರಮುಖ ಅಧಿಕಾರಿಗಳನ್ನು ಒಮ್ಮತಕ್ಕೆ ತೆಗೆದುಕಂಡು ಚೀನಾ ದೇಶದ ದಕ್ಷಿಣ ಭಾಗದಲ್ಲಿರುವ ಕೆಲವು ಪ್ರದೇಶಗಳಲ್ಲಿ ವಿಶೇಷ ಆರ್ಥಿಕ ವಲಯಗಳನ್ನ ನಾವು ಸೃಷ್ಟಿ ಮಾಡಬೇಕು. ಈ ರೀತಿಯ ಪ್ರಕ್ರಿಯೆ ಈ ಭಾಗಕ್ಕೆ ಮಾತ್ರ ಸೀಮಿತ. ಬೇರೆ ಎಲ್ಲಿಯೂ ಅಂದರೆ ಮೇನ್‌ಲ್ಯಾಂಡ್ ಚೀನಾದಲ್ಲಿ ಇದು ಇರಬಾರದು ಎನ್ನುವ ನಿರ್ಧಾರಕ್ಕೆ ಬರಲಾಯಿತು. ಹಾಗಾಗಿ ದಕ್ಷಿಣ ಚೀನಾದ ಸಮುದ್ರ ತೀರದಲ್ಲಿ ೫ ವಿಶೇಷ ಆರ್ಥಿಕ ವಲಯಗಳನ್ನು ಸರಕಾರವೇ ಸೃಷ್ಟಿಮಾಡಲು ತೀರ್ಮಾನಿಸಿತು. ಈ ಸೃಷ್ಟಿಮಾಡುವ ಪ್ರಕ್ರಿಯೆಗೆ ಬಹಳಷ್ಟು ಚಿಂತನೆ ನಡೆಸಿದರು. ಯೋಚನೆ ಮಾಡಿದರು. ಅನೇಕ ವಿಚಾರ ಮಂಥನಗಳ ನಂತರ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಿ ೫ ವಿಶೇಷ ಆರ್ಥಿಕ ವಲಯಗಳನ್ನು ೧೯೮೦ರಲ್ಲಿ ಅವರು ಪ್ರಾರಂಭ ಮಾಡಿದರು. ಈ ವಿಶೇಷ ಆರ್ಥಿಕ ವಲಯಕ್ಕೆ ಸರಕಾರವೇ ವರ್ಲ್ಡ್‌ಕ್ಲಾಸ್ ಇಫ್ರಾಸ್ಟ್ರಕ್ಚರ್‌ಅನ್ನು ಸೃಷ್ಟಿಮಾಡಿತು. ಸರಕಾರದ್ದೇ ಜಮೀನು ಅಂದರೆ ಪುಕ್ಕಟೆ ಜಮೀನು ನೀಡುವ ಪದ್ದತಿ ಚೀನಾದಲ್ಲಿ ಇರಲೇ ಇಲ್ಲ. ಆದರೆ ಈ ಯೋಜನೆಯಲ್ಲಿ ಚೀನಾ ಸರಕಾರವೇ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಸೃಷ್ಟಿ ಮಾಡಿ ವಿದೇಶಿ ಬಂಡವಾಳ ಹೂಡಿಕೆದಾರರನ್ನು ಆಮಂತ್ರಿಸಿತು. ಏಕೆಂದರೆ, ಚೀನಾಕ್ಕೆ ಬಂಡವಾಳಿಗರು ಬರಲು ಎಲ್ಲರೂ ಹೆದರುತ್ತಿದ್ದರು. ಮೇನ್‌ಲ್ಯಾಂಡ್ ಚೀನಾದಲ್ಲಿ ಕಮ್ಯುನಿಸಂ ಇದೆ. ಈ ವಿಶೇಷ ಆರ್ಥಿಕ ವಲಯದಲ್ಲಿ ನಿಮ್ಮ ತಂಟೆಗೆ ನಾವು ಬರುವುದಿಲ್ಲ. ನಿಮಗೆ ಯಾವುದೇ ರೀತಿಯ ಅಡ್ಡಿ ಆತಂಕಗಳನ್ನು ಸರಕಾರ ಹೇರುವುದಿಲ್ಲ. ಮೇನ್‌ಲ್ಯಾಂಡ್ ಚೀನಾದಲ್ಲಿ ಏನು ಸಿಸ್ಟಂ ಇದೆ ಇಲ್ಲಿ ಡಿಫರೆಂಟ್ ಸಿಸ್ಟಂ ಇರುತ್ತದೆ. ತೆರಿಗೆಗಳಲ್ಲಿ ತೀರಾ ಹೆಚ್ಚಿನ ವಿನಾಯ್ತಿಗಳನ್ನು ಕೊಡುತ್ತೇವೆ. ಎಲ್ಲಾ ಪ್ರೋತ್ಸಾಹಗಳನ್ನು ಎಕ್ಸ್‌ಪೋರ್ಟ್‌ಗೆ ಕೊಡುತ್ತೇವೆ. ನೀವು ಸಿದ್ಧ ವಸ್ತುಗಳನ್ನು ಎಕ್ಸ್‌ಪೋರ್ಟ್ ಮಾಡಿ ಚೀನಾ ಒಂದು ಎಕ್ಸ್‌ಪೋರ್ಟಿಂಗ್ ಕಂಟ್ರಿ ಅನ್ನುವ ಸ್ಥಿತಿಗೆ ನೀವು ತರಬೇಕು. ಇದು ಅವರ ಪ್ರಮುಖ ಕರಾರು. ಈ ಪದ್ದತಿಗೆ ಅವರೇ ಹೇಳಿದರು. ಚೀನಾ ದೇಶದಲ್ಲಿ ಓನ್‌ಕಂಟ್ರಿ ಟೂ ಸಿಸ್ಟಂ ಎಂದು. ಒನ್ ಕಂಟ್ರಿ ಎಂದರೆ ಭೌಗೋಳಿಕವಾಗಿ ಚೀನಾ ಒಂದೇನೆ. ಆದರೆ ಎರಡು ಸಿಸ್ಟಂ; ಮೈನ್ ಸಿಸ್ಟಂ ಕಮ್ಯುನಿಸಂ. ಅಲ್ಲಿ ಖಾಸಗೀ ಬಂಡವಾಳಗಾರರಿಗೆ ಅವಕಾಶವಿಲ್ಲ. ಮತ್ತೊಂದು ಸಿಸ್ಟಂ ಈ ಸ್ಪೆಶಲ್ ಏರಿಯಾಗಳಲ್ಲಿ ಮಾತ್ರ. ಖಾಸಗೀ ಕ್ಷೇತ್ರಕ್ಕೆ ವಿಶೇಷವಾದ ಸೌಲತ್ತು ಮತ್ತು ಆದ್ಯತೆ ನೀಡಲಾಯಿತು. ಈ ಹಿನ್ನೆಲೆಯಲ್ಲಿ ಚೀನಾ ಕಮ್ಯೂನಿಸ್ಟ್ ಪದ್ಧತಿಯನ್ನು ಹೋಗಲಾಡಿಸಿ ಬಂಡವಾಳ ಶಾಹಿಯನ್ನು ಅಳವಡಿಸಿಕೊಳ್ಳುವುದಕ್ಕೆ ಮೊದಲ ಹೆಜ್ಜೆಯಾಗಿ ವಿಶೇಷ ಆರ್ಥಿಕ ವಲಯನ್ನು ಸೃಷ್ಟಿಸಿತು. ಇದು ವಿಶೇಷ ಎನ್ನುವುದಕ್ಕೆ ನೀಡಬಹುದಾದ ಅರ್ಥವಾಗಿದೆ. ಭಾರತದ ಆಗಿನ ಎನ್‌ಡಿಎ ಸರಕಾರ (೨೦೦೦ನೇ ಇಸವಿ) ಕೈಗಾರಿಕೆ ಮತ್ತು ವಾಣಿಜ್ಯ ವ್ಯವಹಾರಗಳ ಮಂತ್ರಿಯಾಗಿದ್ದ ಮುರಸೊಳಿಮಾರನ್ ಅವರು ಚೀನಾ ದೇಶಕ್ಕೆ ಪ್ರವಾಸ ಕೈಗೊಂಡು ಚೀನಾ ದೇಶಕ್ಕೆ ಹೋಗಿ ಅಲ್ಲಿಯ ಎಸ್.ಇ.ಝಡ್‌ನ ವಿಶೇಷತೆಯನ್ನು ನೋಡಿಕೊಂಡು ಬರುತ್ತಾರೆ. ಚೀನಾ ದೇಶದಲ್ಲಿಯ ವಿಶೇಷ ಆರ್ಥಿಕ ವಲಯಗಳು ಚೆನ್ನಾಗಿ ಕೆಲಸ ಮಾಡಿ ರಷ್ಯಾ ಮತ್ತಿತರ ದೇಶಗಳಿಗೆ ಸಿದ್ಧ ಸಾಮಗ್ರಿಗಳು ರಫ್ತಾಗುತ್ತಿರುವುದನ್ನು ಕಂಡು ನಾವೂ ಕೂಡ ಅದೇರೀತಿ ಮಾಡಬೇಕು ಅಂದುಕೊಂಡು ಮರಳಿ ಬಂದವರೇ ನಮ್ಮ ದೇಶದಲ್ಲಿ ವಿಶೇಷ ಆರ್ಥಿಕ ವಲಯದ ಪರಿಕಲ್ಪನೆಯನ್ನು ಸರಕಾರಿ ವಲಯದಲ್ಲಿ ಪ್ರಸ್ತಾಪಕ್ಕೆ ತಂದರು ಮತ್ತು ಇದಕ್ಕೆ ಕಾಯಿದೆ ರೂಪಿಸುವುದರೊಳಗೆ ಎನ್.ಡಿ.ಎ ಸರಕಾರ ಬದಲಾಯಿತು.

ಮುಂದೆ ಚುನಾವಣೆ ನಡೆದು ೨೦೦೪ರಲ್ಲಿ ಯುಪಿಎ ಸರಕಾರ ಅಧಿಕಾರಕ್ಕೆ ಬಂದಿತು. ಬಳಿಕ ಎಸ್.ಸಿ.ಝಡ್ ಬಗ್ಗೆ ಇದ್ದ ಕರಡು ಕಾಯಿದೆಯನ್ನು ಪರಿಶೀಲಿಸಿ ಚರ್ಚಿಸಿ ಕಾಯಿದೆಗೆ ಅನುಮೋದನೆ ನೀಡಲಾಯಿತು. ನಂತರ ೨೦೦೬ರ ಸೆಪ್ಟೆಂಬರ್‌ನಲ್ಲಿ ಎಸ್.ಇ.ಝಡ್‌ನ ನಿಯಮಗಳು ರೂಪುಗೊಂಡವು. ಅಂದಿನಿಂದಲೇ ದೇಶದಲ್ಲಿ ವಿಶೇಷ ಆರ್ಥಿಕ ವಲಯ ಜಾರಿಗೆ ಬಂತು ಎಂದು ಹೇಳಬಹುದು. ಇಂಡಿಯಾದಲ್ಲಿ ೨೦೦೫–೦೬ರಲ್ಲಿ ವಿಶೇಷ ಆರ್ಥಿಕ ವಲಯ ಆರಂಭವಾಗುವ ಸಂದರ್ಭದಲ್ಲಿ ಚೀನಾದಲ್ಲಿದ್ದಂತ ಪರಿಸ್ಥಿತಿ ಇರಲಿಲ್ಲ. ನಮ್ಮಲ್ಲಿ ಎಂದಿಗೂ ಕಮ್ಯೂನಿಸಂಅನ್ನು ಅನುಸರಿಸಲೇ ಇಲ್ಲ. ಮಿಶ್ರ ಆರ್ಥಿಕ ನೀತಿಯನ್ನು ಅನುಸರಿಸುತ್ತಿದ್ದೆವು. ೧೯೯೧ನೇ ಇಸವಿಗೆ ಬರುವ ಹೊತ್ತಿಗೆ ನಾವಾಗಲೇ ಉದಾರೀಕರಣವನ್ನು ಅಳವಡಿಸಿಕೊಂಡಿದ್ದವು. ಅಂದಿನಿಂದ ಖಾಸಗಿ ಕ್ಷೇತ್ರಕ್ಕೆ ಯಾವುದೇ ಅಡ್ಡಿ ಆತಂಕಗಳು ಇರಲಿಲ್ಲ. ಟಾಟಾ, ಬಿರ್ಲಾ ಮುಂತಾದ ಬಹಳ ದೊಡ್ಡ ದೊಡ್ಡ ಖಾಸಗಿ ಕಂಪನಿಗಳು ಕೆಲಸ ನಿರ್ವಹಿಸುತ್ತಿದ್ದವು. ಆದ್ದರಿಂದ ಚೀನಾಕ್ಕೆ ಯಾವ ವಿಶೇಷ ಆರ್ಥಿಕ ವಲಯದ ಕಾನೂನು ಅಗತ್ಯವಿತ್ತೋ ಅದು ಇಂಡಿಯಾಕ್ಕೆ ಒಟ್ಟಾರೆ ಅಪ್ರಯೋಜಕವಾಗಿತ್ತು ಎನ್ನಬಹುದು. ಏಕೆಂದರೆ ಇಲ್ಲಿ ಯಾವುದೇ ವಿಶೇಷತೆ ಇರಲಿಲ್ಲ. ಆಗಾಗಲೇ ಖಾಸಗಿ ಉದ್ಯಮಗಳು ಎಲ್ಲಿ ಬೇಕೆಂದರಲ್ಲಿ ಕೈಗಾರಿಕೆಗಳನ್ನು ಆರಂಭ ಮಾಡಬಹುದಿತ್ತು. ಲೈಸೆನ್ಸಿಂಗ್ ಪಾಲಸಿಯನ್ನು ನಮ್ಮ ದೇಶವು ತೆಗೆದು ಹಾಕಿತ್ತು (ಕೆಲವು ೧೧ರಿಂದ ೧೫ ಕೈಗಾರಿಕೆಗಳನ್ನು ಹೊರತುಪಡಿಸಿ) ಇಲ್ಲಿ ಯಾವ ಪದಾರ್ಥಗಳನ್ನಾದರೂ ಉತ್ಪಾದನೆ ಮಾಡಿಕೊಳ್ಳಬಹುದಿತ್ತು. ಚೀನಾ ದೇಶಕ್ಕಿಂತ ೧೫ವರ್ಷಗಳು ಮೊದಲೇ ನಮ್ಮ ಭಾರತ ದೇಶದಲ್ಲಿ ಮುಕ್ತ ಆರ್ಥಿಕ ನೀತಿಯನ್ನು ಖಾಸಗೀಕರಣ, ಉದಾರೀಕರಣ, ಜಾಗತೀಕರಣ ನೀತಿಯನ್ನು ಒಪ್ಪಿ ಜಾರಿಗೆ ತರಲಾಗಿತ್ತು. ಹಾಗಾಗಿ ಈ ಸ್ಪೆಶಲ್ ಎಕನಾಮಿಕ್ ಝೋನ್ ಅನ್ನುವುದಕ್ಕೆ ಇಲ್ಲಿ ಯಾವುದೇ ವಿಶೇಷತೆ ಗಮನ ಸೆಳೆಯಲ್ಲಿಲ್ಲ. ಹಾಗಾಗಿ ಈ ರೀತಿಯ ಅಭಿವೃದ್ಧಿಯಿಂದ ವಿಶೇಷ ಆರ್ಥಿಕ ವಲಯದ ಮೂಲಕ ಕೈಗಾರಿಕಾಭಿವೃದ್ಧಿ ಮಾಡಬೇಕೆಂದಾದರೆ ಉಳಿದ ಯಾವುದೇ ವಿಧಗಳಿಂದಾಗಲೀ ಹೊರಗಡೆಯಿಂದಾಗಲೀ ಅಭಿವೃದ್ಧಿ ಆಗುವುದು ಬೇಡವೆ? ಅನ್ನುವ ಪ್ರಶ್ನೆ ಉದ್ಬವವಾಗುತ್ತದೆ. ಈ ಸ್ಪೆಶಲ್ ಎಕನಾಮಿಕ್ ಝೋನ್–ಇಲ್ಲಿ ಮಾತ್ರ ಗುಣಮಟ್ಟದ ಪದಾರ್ಥಗಳನ್ನು ಉತ್ಪಾದನೆ ಮಾಡಿ ರಫ್ತು ಮಾಡಬೇಕು ಎನ್ನುವುದಾದರೆ ಉಳಿದ ಪ್ರದೇಶಗಳಲ್ಲಿ ಗುಣಮಟ್ಟದ ಪದಾರ್ಥಗಳ ಉತ್ಪಾದನೆ ಆಗಬಾರದೆ ಅಥವಾ ಆಗುತ್ತಿಲ್ಲವೆ? ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಹಾಗಾಗಿ ಇಡೀ ದೇಶವೇ ಮುಕ್ತ ಆರ್ಥಿಕತೆಗೆ ತೆರೆದುಕೊಂಡಿರುವಾಗ ಈ ವಿಶೇಷ ಆರ್ಥಿಕ ವಲಯ ನೀತಿಯ ಅವಶ್ಯಕತೆ ನಮ್ಮ ದೇಶಕ್ಕೆ ಅಗತ್ಯವಿರಲಿಲ್ಲ ಎನ್ನಬಹುದು. ಏಕೆಂದರೆ, ನಮ್ಮ ದೇಶದ ಕೈಗಾರಿಕಾಭಿವೃದ್ದಿಯೇ ಎಕ್ಸ್‌ಪೋರ್ಟ್ ಅಭಿವೃದ್ಧಿಯಾಗಿದೆ. ಈ ದ್ವೀಪದಂತಹ ಅಭಿವೃದ್ಧಿ ವಲಯಗಳನ್ನು ಸೃಷ್ಟಿಸುವ ಯಾವ ಅಗತ್ಯವೂ ಇರಲಿಲ್ಲ. ಇದು ದೇಶದ ಅಭಿವೃದ್ದಿಗೆ ಒಂದು ರೀತಿಯಲ್ಲಿ ಮಾರಕವೂ ಕೂಡ. ಇಡೀ ದೇಶದಲ್ಲಿ ಹಲವಾರು ರೀತಿಯ ಕೈಗಾರಿಕಾ ಪ್ರದೇಶಗಳು ಇದ್ದರೂ ಕೂಡ ಅವುಗಳಿಗೆ ಸಿಗದ ಪ್ರಾಶಸ್ತ್ಯ ಈ ವಿಶೇಷ ಆರ್ಥಿಕ ವಲಯಕ್ಕೆ ಸಿಗುವ ರೀತಿ ನೀತಿ ನಿಯಮ ರೂಪಿತಗೊಂಡಿವೆ. ಈ ನಿಯಮಗಳ ಪ್ರಕಾರ ನಮ್ಮ ದೇಶದ ವ್ಯಾಪಾರ ವಿನಿಮಯ ಕಾಯಿದೆಯಾಗಲೀ, ಬೆಲೆಗಳ ನಿಗದೀಕರಣದ ಕಾಯಿದೆಯಾಗಲೀ ಯಾವುದೂ ಕೂಡ ಇವರಿಗೆ ಅನ್ವಯವಾಗುವುದಿಲ್ಲ. ಅಷ್ಟೇ ಏಕೆ ನಮ್ಮ ಸಿವಿಲ್ ಮತ್ತು ಕ್ರಿಮಿನಲ್ ಲಾ ಕೂಡ ಎಸ್‌ಇಝಡ್‌ಗೆ ಅನ್ವಯ ಆಗುವುದಿಲ್ಲ. ಅಂದರೆ

ಅವರದೇ ಪ್ರತ್ಯೇಕವಾದ ಕಾನೂನು, ಅವರದೇ ಪ್ರತ್ಯೇಕವಾದ ಕೋರ್ಟ್ ರೂಪಿಸಿಕೊಂಡಿದೆ. ಚೀನಾ ದೇಶದಲ್ಲಿ ಎಸ್‌ಇಝಡ್ ಅಭಿವೃದ್ಧಿ ಮಾಡುವವರಿಗೆ ಭೂಮಿ ಮಾಲೀಕನಿಗೆ ನೀಡುವುದಿಲ್ಲ. ಅದು ಸರಕಾರದ ಸ್ವಾದೀನದಲ್ಲಿಯೇ ಇರುತ್ತದೆ. ಆದರೆ ನಮ್ಮ ದೇಶದ ನಿಯಮಗಳಲ್ಲಿ ಭೂಮಿ ಎಸ್‌ಇಝಡ್ ಮಾಲೀಕನ ಸ್ವಾದೀನದಲ್ಲಿರುತ್ತದೆ. ಅಂದರೆ ಇದು ಪರೋಕ್ಷವಾಗಿ ಲ್ಯಾಂಡ್ ಡೆವೆಲಪರ್ಸ್‌ಗೆ ಅನುಕೂಲ ಮಾಡಿಕೊಡುವ ಕಾನೂನಿನಂತಿದೆ. ಈ ಭೂಮಿಯನ್ನು ಕೃಷಿಕರಿಂದ ಕಸಿದು ಡೆವೆಲಪರ್ಸ್‌ಗೆ ಕೊಡಬೇಕು. ಇದಕ್ಕೆ ಬಳಸುವಂತಹ ಕಾನೂನು ಯಾವುದೆಂದರೆ? ಭೂ ಆಕ್ವಿಜಿಶನ್ ಆಕ್ಟ್ ೧೮೯೪. ಇದು ೧೨೪ ವರ್ಷಗಳ ಹಿಂದಿನ ಕಾನೂನು. ಬ್ರಿಟೀಷರಿದ್ದಾಗ ಮಾಡಿಕೊಂಡಂತಹ ಕಾನೂನು. ಸ್ವಾತಂತ್ರ್ಯ ಬರುವುದಕೆ ೫೦ ವರ್ಷಗಳ ಮೊದಲು ಮಾಡಿದಂತಹ ಕಾನೂನು. ಸಾರ್ವಜನಿಕ ಸಂಸ್ಥೆಗಳ ನಿರ್ಮಾಣ ಕಾರ್ಯಕ್ಕೆ, ಡ್ಯಾಂಗಳ ನಿರ್ಮಾಣಕ್ಕೆ, ರಸ್ತೆ ನಿರ್ಮಾಣಕ್ಕೆ, ಕಛೇರಿ ನಿರ್ಮಾಣಕ್ಕೆ ಜಮೀನು ಬೇಕು ಎಂದರೆ ಯಾವುದೇ ಪರಿಹಾರ ಕೊಡದೆ ಯಾರ ಜಮೀನು ಬೇಕಾದರೂ ಮುಟ್ಟುಗೋಲು ಹಾಕಿಕೊಳ್ಳುವ ಸಾರ್ವಭೌಮ ಅಧಿಕಾರ ಈ ಕಾನೂನಿನ ಪ್ರಕಾರ ಸರಕಾರಕ್ಕಿದೆ. ಈ ಕಾಯಿದೆಯಿಂದ ರೈತರ ಜಮೀನನ್ನು ಬಹಳ ಸುಲಭವಾಗಿ ಸ್ವಾದೀನ ಪಡಿಸಿಕೊಳ್ಳಬಹುದಾಗಿದೆ. ಎಸ್‌ಇಝಡ್‌ಗೆ ಇಂದು ಇಷ್ಟೊಂದು ಡಿಮಾಂಡ್ ಏಕೆ ಇದೆ ಅಂದರೆ ಬಹಳ ಸುಲಭ ದರದಲ್ಲಿ ಜಮೀನುಗಳನ್ನು ಕೊಳ್ಳಬಹುದು. ಅದಕ್ಕೆ ಅಂದಿನ ರಿಸರ್ವ್ ಬ್ಯಾಂಕ್‌ನಲ್ಲಿದ್ದ ವೈಲಿ ರೆಡ್ಡಿ ಅವರು ನಾನು ಇದಕ್ಕೆ ಸಾಲ ಕೊಡಬೇಕಾದರೆ ಇದಕ್ಕೆ ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್ ಅಂತ ಸಾಲ ಕೊಡುವುದಿಲ್ಲ– ಇದು ರಿಯಲ್ ಎಸ್ಟೇಟ್ ವ್ಯವಹಾರ ಅಂತ ಎಂದಿದ್ದರು. ಇದು ಒಂದು ರೀತಿಯಲ್ಲಿ ರಿಯಲ್ ಎಸ್ಟೇಟ್ ಬಿಸಿನೆಸ್. ಭೂಮಿಯನ್ನು ಡೆವಲಪ್ ಮಾಡಿದ ನಂತರ ಅಲ್ಲಿಯ ಕಾಯಿದೆ ಪ್ರಕಾರ ಇರವ ಭೂಮಿಯಲ್ಲಿ ಶೇ.೨೫ರಷ್ಟ ಭೂಮಿಯನ್ನು ಉತ್ಪಾದನಾ ಘಟಕಕ್ಕೆ ಬಳಸಿಕೊಳ್ಳಬೇಕು. ಉಳಿದ ಶೇ.೭೫ರಷ್ಟು ಭೂಮಿಯನ್ನು ಅಲ್ಲಿರುವ ದೊಡ್ಡ ದೊಡ್ಡ ಬಂಡವಾಳಗಾರರಿಗೆ ವಾಸ ಮಾಡಲಿಕ್ಕೆ ಬೇಕಾದ ಬಂಗಲೆಗಳು, ಹೋಟೆಲ್‌ಗಳು, ಈಜುಕೊಳಗಳು, ಗಾಲ್ಫ್ ಕ್ಲಬ್‌ಗಳು– ಇನ್ಫ್ರಾಸ್ಟ್ರಕ್ಚರ್ ಅಂಡ್ ಎಂಟರ್‌ಟೈನ್‌ಮೆಂಟ್ ಅಂತ ಎರಡು ಪದಗಳಲ್ಲಿ ಇದನ್ನು ಹಿಡಿದಿಟ್ಟಿರುವುದು ಕಂಡು ಬರುತ್ತದೆ. ದೇಶದಲ್ಲಿ ಅನ್ನ ಬೆಳೆಯುವಂತಹ ಸಾವಿರಾರು ಹೆಕ್ಟೇರ್‌ಗಳನ್ನು ರೈತರಿಂದ ಒತ್ತಾಯಪೂರ್ವಕವಾಗಿ ಕಸಿದು ಸ್ವಾದೀನ ಪಡಿಸಿಕೊಳ್ಳಲಾಗುತ್ತಿದೆ.

ಪಶ್ಚಿಮ ಬಂಗಾಳ ರಾಜ್ಯದ ನಂದಿಗ್ರಾಮದಲ್ಲಿ (೨೦೦೬) ಇದೇ ರೀತಿ ರೈತರ ಜಮೀನನ್ನು ವಶಪಡಿಸಿ ಕೊಳ್ಳಬೇಕಾದ ಸಂದರ್ಭದಲ್ಲಿ ರೈತರು ಉಗ್ರವಾಗಿ ಪ್ರತಿಭಟನೆ ಮಾಡಿದರು. ನಾವು ಭೂಮಿ ಕೊಡುವುದಿಲ್ಲ ಎಂದು ಹೇಳಿ ಪಶ್ಚಿಮ ಬಂಗಾಳದ ಪೋಲಿಸ್‌ರ ವಿರುದ್ಧ ಸೆಟೆದು ನಿಂತಾಗ, ಅಲ್ಲಿನ ಸರಕಾರ ನಂದಿ ಗ್ರಾಮದ ಹಳ್ಳಿಯನ್ನೆಲ್ಲಾ ಜಪ್ತಿ ಮಾಡುತ್ತದೆ. ಅದು ನಿಜವಾಗಲೂ ಯುದ್ಧದ ರೀತಿಯಲ್ಲಿತ್ತು ಎನ್ನುವುದನ್ನು ಆಗಿನ ಮಾಧ್ಯಮಗಳು ಬಿಂಬಿಸಿದ್ದವು. ಊರಿಗೆ ಪೋಲಿಸರು ಬರುತ್ತಿದ್ದಾರೆ ಎಂದು ೮ ಶಾಲಾ ಮಕ್ಕಳು ಮಾಹಿತಿ ನೀಡಿದ್ದಾರೆ ಎಂದು ೮ ಮಕ್ಕಳನ್ನು ಗುಂಡಿಕ್ಕಿ ಕೊಂದು ಅವರನ್ನು ಸಾಲಾಗಿ ಮಲಗಿಸಿದ್ದನ್ನು ಅಂದಿನ ಮಾಧ್ಯಮಗಳ ಮೂಲಕ ನಾವು ನೋಡಿದ್ದೇವೆ. ನಂತರ ಅಲ್ಲಿಯ ಜನರು ಕಮ್ಯುನಿಸ್ಟ್ ಸರಕಾರದ ವಿರುದ್ಧ ಮತ ಚಲಾಯಿಸಿ ೨೭ವರ್ಷಗಳ ಸರಕಾರವನ್ನು ಬದಲಾಯಿಸಿದರು. ಅದೇ ರೀತಿ ಉತ್ತರ ಪ್ರದೇಶದ ನೋಯ್ಡಾದ ಹಳ್ಳಿಯ ರೈತರ ಜಮೀನನ್ನು ವಶಪಡಿಸಿಕೊಳ್ಳಲು ಹೋದಾಗ ಅಲ್ಲಿಯ ರೈತರು ದಂಗೆಯೆದ್ದು ಕೈಗೆ ಸಿಕ್ಕದ್ದನ್ನು ತೆಗೆದುಕೊಂಡು ಅಲ್ಲಿಯ ಡಿಸಿಗೂ ಹೊಡೆದರು, ಪೋಲಿಸಿನವರಿಗೂ ಹೊಡೆದರು. ಒಂದು ಸಾರಿ ಈ ರೀತಿ ದಂಗೆ ಹೇಳುವುದನ್ನು ರೈತರು ಕಲಿತುಕೊಂಡರೆ ಬಹಳ ಕಷ್ಟ. ಎಷ್ಟು ಮಿಲಿಟರಿ ಇದ್ದರೆ ಇವರನ್ನು ಕಂಟ್ರೋಲ್ ಮಾಡಲು ಸಾಧ್ಯ. ಸರಕಾರ ನಂದಿ ಗ್ರಾಮದ ಘಟನೆಯಾದ ಮೇಲೆ ಇಲ್ಲಿ ಎರಡು ಬೆಳೆ ತೆಗೆಯುವ ಪ್ರೈಮ್‌ಲ್ಯಾಂಡ್ ಅನ್ನು ಅಕ್ವೈರ್ ಮಾಡಬಾರದು. ಬಂಜರು ಭೂಮಿಯನ್ನು ಮಾತ್ರ ವಶಪಡಿಸಿಕೊಳ್ಳಬೇಕು ಎಂದು ಹೇಳಿತು.

ಈ ಮೇಲಿನ ನಿಯಮವನ್ನು ಮಂಗಳೂರಿನ ಎಸ್‌ಇಝಡ್‌ನಲ್ಲಿ ನೋಡಿದರೆ ಅಲ್ಲಿ ಒಂದು ವರ್ಷಕ್ಕೆ ಸುಮಾರು ೨೦೦–೩೦೦ ಸೆಂ.ಮೀ ನಷ್ಟು ಹೇರಳವಾಗಿ ಮಳೆ ಬೀಳುತ್ತದೆ. ಇಲ್ಲಿ ಬಂಜರು ಭೂಮಿ ಇರೋದು ಅಂದರೆ ನಂಬುವುದು ಕಷ್ಟ. ಅಲ್ಲಿ ಸೊಗಸಾಗಿ ಅಡಿಕೆ, ಬಾಳೆ, ತೆಂಗಿನ ತೋಟವಿದೆ, ಗೇರು ತೋಟವಿದೆ. ಆದರೂ ಅಲ್ಲಿ ಎಸ್.ಸಿ.ಝಡ್ ಬಂದಿದೆ. ಈ ಎಸ್‌ಇಝಡ್ ಯೂನಿಟ್‌ಗಳಿಗೆ ತೆರಿಗೆಯಲ್ಲಿ ವಿನಾಯಿತಿ ಇದೆ. ಅದು ಇನ್‌ಕಂಟ್ಯಾಕ್ಸ್, ಲೋಕಲ್ ಟ್ಯಾಕ್ಸ್, ಎಲೆಕ್ಟ್ರಿಸಿಟಿ ಟ್ಯಾಕ್ಸ್, ವ್ಯಾಟ್ ಇವುಗಳಲ್ಲಿ ವಿನಾಯಿತಿ ನೀಡಲಾಗಿದೆ. ಆಮದು ಮಾಡಿಕೊಂಡದ್ದಕ್ಕೆ ಕಸ್ಟಂ ಡ್ಯೂಟಿಯಲ್ಲಿ ವಿನಾಯಿತಿ ಇದೆ. ಅದಕ್ಕೆ ಡ್ಯೂಟಿ ಫ್ರೀಎನ್‌ಕ್ಲೇವ್ (ಶುಲ್ಕ ರಹಿತವಾದ ಪ್ರದೇಶ). ಅಂದರೆ ಒಂದೇ ದೇಶದಲ್ಲಿ ಎರಡು ಸಿಸ್ಟಂ. ಈ ದ್ವೀಪದಂತಹ ಪ್ರದೇಶಕ್ಕೆ ತೆರಿಗೆ ವಿನಾಯಿತಿ. ದೇಶದ ಉಳಿದ ಭಾಗಗಗಳಲ್ಲಿ ಎಲ್ಲಾ ತೆರಿಗೆಗಳನ್ನು ಕೊಡಬೇಕು. ನಂತರ ಎಸ್‌ಇಝಡ್ ಆಕ್ಟ್ ಹೇಳುವ ಪ್ರಕಾರ ವಿದ್ಯುತ್ ನಿರಂತರವಾಗಿ ಕೊಡಬೇಕು. ನೀರನ್ನು ನಿರಂತರವಾಗಿ ಪೂರೈಸಬೇಕು. ಅಂದರೆ ಕೊರತೆಯಲ್ಲಿರುವ ಸಂಪತ್ತನ್ನು ಆದ್ಯತೆಯ ಮೇರಗೆ ಎಸ್‌ಇಝಡ್‌ಗೆ ಪೂರೈಸಬೇಕು. ಯಾಕೆಂದರೆ ಅವರು ಎಕ್ಸ್‌ಪೋರ್ಟ್ ಮಾಡುತ್ತಾರೆ. ಆದರೆ ಎಸ್‌ಇಝಡ್ ಹೊರಗಡೆ ಇರುವ ರೈತರು ಅವರ ಜಮೀನಿನಲ್ಲಿ ನೀರು ಹಾಯಿಸಿಕೊಳ್ಳಬೇಕೆಂದರೆ ತೆರಿಗೆ ಕೊಡುತ್ತಾರೆ. ಆದರೆ ಅವನಿಗೆ ಕರೆಂಟ್ ಸರಿಯಾಗಿ ಸಿಗುವುದಿಲ್ಲ. ನೀರಿನ ಕರ ಕಟ್ಟುತ್ತಾರೆ, ಆದರೆ ನೀರು ಸರಿಯಾಗಿ ಸಿಗುವುದಿಲ್ಲ. ಆದರೆ ಏನೂ ತೆರಿಗೆ ಕೊಡದವರಿಗೆ ಎಲ್ಲವನ್ನೂ ಕೊಡಲಾಗುತ್ತಿದೆ. ಎಲ್ಲಾ ತೆರಿಗೆ ಕೊಡುವವರಿಗೆ ಮಿತವಾಗಿ ಸವಲತ್ತುಗಳು ಸಿಗುತ್ತಿವೆ. ಈ ರೀತಿಯಲ್ಲಿ ಎಸ್.ಇ.ಝಡ್ ಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಹಾಗಾಗಿ ೨೦೦೬ ಫೆಬ್ರವರಿಯಲ್ಲಿ ಆರಂಭವಾದ ಎಸ್.ಇ.ಝಡ್ ಬರೇ ೧೦ತಿಂಗಳಲ್ಲಿ ಅಂದರೆ ೨೦೦೬ರ ಡಿಸೆಂಬರ್ ಹೊತ್ತಿಗೆ ೪೦೦ ಎಸ್‌ಇಝಡ್‌ಗಳಿಗೆ ಅರ್ಜಿಗಳು ಬಂದಿದ್ದವು, ಅವುಗಳಿಗೆ ಅನುಮತಿ ನೀಡಲಾಯಿತು. ಇದೇ ಚೀನಾ ದೇಶದಲ್ಲಿ ಕಳೆದ ೩೦ ವರ್ಷಗಳಿಂದ ಇರೋದು ಬರೀ ೯ ಎಸ್‌ಇಝಡ್‌ಗಳು. ನಾವು ೧೦ ತಿಂಗಳಲ್ಲಿ ೪೦೦ ಎಸ್‌ಇಝಡ್‌ಗಳಿಗೆ ಮಂಜೂರಾತಿ ನೀಡುತ್ತೇವೆ. ನಮ್ಮ ದೇಶಕ್ಕೆ ಎಷ್ಟು ಎಸ್‌ಇಝಡ್ ಬೇಕು? ಎನ್ನುವ ಯಾವುದೇ ಲೆಕ್ಕಾಚಾರ ನಮ್ಮಲ್ಲಿ ಮಾಡಲಿಲ್ಲ. ಏನೂ ಅನುಭವವೇ ಇಲ್ಲದಿರುವಲ್ಲಿ ಏಕಾಏಕಿ ೪೦೦–೫೦೦ ಎಸ್‌ಇಝಡ್‌ಗಳನ್ನು ಮಾಡಿಕೊಳ್ಳುವುದಕ್ಕೆ ಮೊದಲು ೪–೫ ಎಸ್‌ಇಝಡ್‌ಗಳನ್ನು ಮಾಡಿ ಅದು ಹೇಗೆ ಕೆಲಸ ಮಾಡುತ್ತದೆ ಎನ್ನುವುದನ್ನು ನೋಡಿ ಅದರ ಆಧಾರದ ಮೇಲೆ ಹೆಚ್ಚಿಸಬಹುದಿತ್ತು. ಅದು ಬಿಟ್ಟು ಮನಬಂದಂತೆ ಯಾರನ್ನೋ ಓಲೈಸಲು ರೈತರ ಜಮೀನನ್ನು ವಶಪಡಿಸಿಕೊಳ್ಳುವುದಕ್ಕೆ ಸರಕಾರದ ಪಾಲಿಸಿಗಳು ಪೂರಕವಾಗಿವೆ. ರೈತರಿಗೂ ಬಂಡವಾಳಗಾರರಿಗೂ ವ್ಯಾಜ್ಯವಾದಾಗ ಪೋಲಿಸಿನವರು ಮತ್ತು ಸರಕಾರ ಬಂಡವಾಳಗಾರರ ಪರ ನಿಂತಿದೆಯೇ ಹೊರತು ರೈತರ ಪರವಾಗಿ ನಿಲ್ಲದಿರುವುದು ಕಂಡುಬರುತ್ತದೆ.

ಇದೆಲ್ಲದರ ಒಳ ಮರ್ಮವನ್ನು ತಿಳಿದ ರೈತರು ಅಲ್ಲಲ್ಲಿ ಪ್ರತಿಭಟನೆ ನಡೆಸಿ ತಮ್ಮ ಜಮೀನಿನ ಸ್ವಾದೀನಕ್ಕೆ ವಿರೋದಿಸಿದ್ದಾರೆ. ಉದಾಹರಣೆಗೆ, ಮುಖೇಶ್ ಅಂಬಾನಿ ಅವರು ಮುಂಬೈ ಮಲ್ಟಿ ಪ್ರಾಡೆಕ್ಟ್ ಎಸ್‌ಇಝಡ್‌ಗೆ ಸುಮಾರು ೨೦ಸಾವಿರ ಎಕರೆ

ಜಮೀನನ್ನು ರಾಯಬರೇಲಿ ಜಿಲ್ಲೆಯಲ್ಲಿ ಸ್ವಾದೀನ ಪಡಿಸಿಕೊಳ್ಳಲು ಸರಕಾರ ಮುಂದಾಯಿತು. ಅಲ್ಲಿಯ ರೈತರು ಎಲ್ಲಾ ಸಂಘಟಿತರಾಗಿ ಒಂದು ಎಕರೆಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರೂ ನಾವು ಜಮೀನನ್ನು ಕೊಡುವುದಿಲ್ಲ ಎಂದು ಹಟ ಹಿಡಿದರು. ನಂತರ ಸರಕಾರದ ಮೇಲೆ ಒತ್ತಡ ತಂದು ರೈತರಿಂದ ಒಂದು ಒಪಿನಿಯನ್ ಪೋಲ್ ಕ್ರಿಯೇಟ್ ಮಾಡಿ ಎಲ್ಲ ರೈತರ ನಿರ್ಧಾರ ಏನೆಂಬುದು ಗೊತ್ತಾಗಲು ರೈತರ ಅಭಿಪ್ರಾಯ ಕೇಳಿತು. ರೈತರೆಲ್ಲರೂ ಒಪಿನಿಯನ್ ಪೋಲ್ ಮಾಡಿದರು ಅದರಲ್ಲಿ ನಾವು ಜಮೀನು ಕೊಡುವುದಿಲ್ಲ ಎಂದು ಶೇ.೯೦ರಷ್ಟು ರೈತರು ಓಟ್ ಮಾಡಿದರು. ಎಸ್ಇಝಡ್ ನಮಗೆ ಬೇಡ ಎಂದು ಹೇಳಿದರು. ನಂತರ ಸರಕಾರ ಮುಂಬೈ ಎಸ್ಇಝಡ್‌ನ್ನು ಡಿನೋಟಿಫೈ ಮಾಡಿತು.

ಅದೇ ರೀತಿ ಗೋವಾ ರಾಜ್ಯದಲ್ಲಿ ೧೧ ಎಸ್ಇಝಡ್‌ಗಳನ್ನು ಸರಕಾರ ಮಂಜೂರು ಮಾಡಿತ್ತು. ಗೋವಾದ ಜನರು ನಮ್ಮದು ಪುಟ್ಟ ರಾಜ್ಯ, ಹೆಚ್ಚು ವಿಸ್ತಾರವಿಲ್ಲ. ಇಷೊಂದು ಎಸ್ಇಝಡ್ ಆರಂಭಿಸಿ ಹೊರಗಿನಿಂದ ಲಕ್ಷ-ಲಕ್ಷ ಜನ ಬಂದರೆ ನಾವು ಗೋವಾನ್ನರೇ ಅಲ್ಪಸಂಖ್ಯಾತರಾಗುತ್ತೇವೆ. ಆದ್ದರಿಂದ ನಮಗೆ ಎಸ್ಇಝಡ್ ಬೇಡ ಎಂದು ಹೇಳಿ ಬಹಳ ದೊಡ್ಡ ಹೋರಾಟ ಮಾಡುತ್ತಾರೆ. ಕೊನೆಗೆ ಅಂದಿನ ಮುಖ್ಯಮಂತ್ರಿ ದಿಗಂಬರ ಕಾಮತ್ ಅವರು ೧೧ ಎಸ್ಇಝಡ್‌ಗಳನ್ನು ರದ್ದು ಪಡಿಸುತ್ತಾರೆ. ಆರಂಭದ ಮೊದಲನೆ ವರ್ಷದಲ್ಲಿ ಇಷ್ಟೊಂದು ಗಲಾಟೆಗಳಾದ್ದರಿಂದ ೨೦೦೬ರ ಕೊನೆವರೆಗೆ ಒಂದು ಪಾರ್ಲಿಮೆಂಟರಿ ಕಮಿಟಿಯನ್ನು ಸರಕಾರ ನೇಮಿಸುತು. ಆ ಪಾರ್ಲಿಮೆಂಟರಿ ಸಮಿತಿಯಲ್ಲಿ ಅಂದಿನ ಎಲ್ಲಾ ಪಕ್ಷದ ೩೧ಜನ ಸದಸ್ಯರಿದ್ದರು. ಅದರ ಅಧ್ಯಕ್ಷರು ಡಾ.ಮುರಳಿಮನೋಹರ ಜೋಶಿ. ಒಂದು ವರ್ಷದ ನಂತರ ಅಂದರೆ ೨೦೦೭ರಲ್ಲಿ ಅವರು ವರದಿಯನ್ನು ಸರಕಾರಕ್ಕೆ ಸಲ್ಲಿಸಿದರು. ವರದಿಯಲಿ ಹೇಳಿದಂತಹ ಕೆಲವು ಪ್ರಮುಖ ಅಂಶಗಳೆಂದರೆ- ಮೊದಲನೆಯದಾಗಿ, ಎಸ್ಇಝಡ್ ನಿತಿಯಿಂದ ಅತ್ಯಂತ ಹೆಚ್ಚು ಹೊಡೆತಕ್ಕೆ ಒಳಗಾಗುವ ಕ್ಷೇತ್ರವೆಂದರೆ ಕೃಷಿ ಕ್ಷೇತ್ರ. ವಿಶೇಷವೆಂದರೆ ಕೃಷಿ ಸಚಿವಾಲಯಕ್ಕೆ ಬೋರ್ಡ್ ಆಫ್ ಅಪ್ರೂವಲ್‌ನಲ್ಲಿ ಪ್ರಾತಿನಿಧ್ಯವೇ ನೀಡದಿರುವುದನ್ನು ಗುರುತಿಸುತ್ತದೆ. ಅಂದರೆ ರೈತರ ಕಷ್ಟಗಳನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಅವಕಾಶವನ್ನೇ ಕೊಡದೆ ಕಾಮರ್ಸ್ ಮಿನಿಸ್ಟ್ರಿ ಮತ್ತು ಇಂಡಸ್ಟ್ರಿಯಲ್ ಮಿನಿಸ್ಟ್ರಿಯವರು ಸಾಕಷ್ಟು ಎಸ್ಇಝಡ್‌ಗಳನ್ನ ಮಂಜೂರು ಮಾಡುತ್ತಿದ್ದಾರೆ. ಇದು ನಿಲ್ಲಬೇಕು ಎಂದು ಹೇಳಿದರು. ಎರಡನೆಯದು, ಈ ಎಸ್ಇಝಡ್ ಕಾಯಿದೆಯಲ್ಲಿ ಒಂದು ಎಸ್ಇಝಡ್ ಸ್ಥಾಪನೆ ಮಾಡಬೇಕಾದರೆ ಕನಿಷ್ಟ ಭೂಮಿ ಎಷ್ಟಿರಬೇಕು ಎಂದು ಹೇಳ್ತಾರೆ ಆದರೆ ಗರಿಷ್ಟ ಎಷ್ಟಿರಬೇಕು ಎಂದು ಹೇಳದಿರುವುದನ್ನು ಗುರುತಿಸುತ್ತದೆ. ಕನಿಷ್ಟ ೧೦ ಎಕರೆ ಬೇಕಾಂತೆ ಎಸ್ಇಝಡ್‌ಗೆ ಸಾವಿರ ಎಕರೆ ಸ್ವಾದೀನ ಮಾಡಿಕೊಂಡರೆ ಸರಕಾರವೇನು ಬೇಡ ಅನ್ನುವುದಿಲ್ಲ. ಯಾಕೆಂದರೆ ಕಾನೂನಿನಲ್ಲಿ ಗರಿಷ್ಟ ಭುಮಿ ಎಷ್ಟಿರಬೇಕೆಂದು ಹೇಳಿಲ್ಲ. ಇದನ್ನು ಅವರು ಗುರುತಿಸಿದರು. ಮೂರನೆಯದಾಗಿ, ಈಗಾಗಲೇ ಎಸ್ಇಝಡ್‌ಗಳಿಗೆ ಅನುಮತಿ ನೀಡಿರುವ ರಾಜ್ಯಗಳಲ್ಲಿ ಶೇ.೬೦ಕ್ಕಿಂತ ಹೆಚ್ಚು ಭೂಮಿ ಕೇಂದ್ರೀಕರಿಸಿರುವುದು ೫ ರಾಜ್ಯಗಳಲ್ಲಿ ಮಾತ್ರ. ಅವು ಮಹರಾಷ್ಟ್ರ. ಕರ್ನಾಟಕ, ತಮಿಳುನಾಡು, ಗುಜರಾತ್, ಆಂದ್ರಪ್ರದೇಶ. ಈ ಐದೂ ರಾಜ್ಯಗಳನ್ನು ಫಾರ್ಮ್ರಾಸ್ ಸೂಸೈಡ್ ಬೆಲ್ಟ್ ಅಂತ ಕರೀತಾರೆ. ೨ಲಕ್ಷಕ್ಕೂ ಹೆಚ್ಚು ರೈತರು ಈ ರಾಜ್ಯಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದರಲ್ಲಿ ಶೇ.೬೦ಕ್ಕಿಂತಲೂ ಹೆಚ್ಚು ಜನರು ಈ ಐದು ರಾಜ್ಯಗಳವರು. ಇದನ್ನು ಗಮನಿಸಿದರೆ ಈ ಎಸ್ಇಝಡ್‌ಗಳು ದೇಶದ ಎಲ್ಲಾ ಕಡೆ ವಿತರಣೆಯಾಗಿಲ್ಲ. ಕೆಲವೇ ರಾಜ್ಯಕ್ಕೆ ಇದು ಸೀಮಿತವಾಗಿರುವುದನ್ನು ಈ ಸಮಿತಿ ಗುರುತಿಸುತ್ತದೆ. ನಂತರ ಭೂಸ್ವಾದೀನ ಕಾಯಿದೆ ೧೮೯೪ಕ್ಕೆ ಬದಲು ಆಧುನಿಕವಾಗಿ ಕೃಷಿಪರವಾದ ಭೂಸ್ವಾದೀನ ಕಾಯಿದೆಯನ್ನು ರಚನೆ ಮಾಡಿಕೊಳ್ಳಬೇಕು ಎಂದು ವರದಿಯಲ್ಲಿ ತಿಳಿಸುತ್ತದೆ.

ನಂತರ ಸಮಿತಿ ವರದಿಯಲ್ಲಿ ಹೇಳಿರುವ ಮತ್ತೊಂದು ಪ್ರಮುಖ ಅಂಶವೆಂದರೆ ಎಸ್ಇಝಡ್ ಮಾಡಬೇಕಾದರೆ ಒಂದು ಮಾಸ್ಟರ್ ಪ್ಲಾನ್ ರಚಿಸಬೇಕು ಎಂದು ಸಲಹೆ ನೀಡಿದೆ. ಚೀನಾದಲ್ಲಿ ಮೊದಲು ಮಾಡಿದ್ದು ಎಷ್ಟು ಎಸ್ಇಝಡ್‌ಗಳು ನಮಗೆ ಬೇಕು? ಹಾಗೂ ಎಲ್ಲಿ ಸ್ಥಾಪನೆಯಾಗಬೇಕು? ಎಂದು ನಿರ್ಧರಿಸುತ್ತಾರೆ. ಒಂದು ಎಸ್ಇಝಡ್ ಮಾಡಿದರೆ ಅಲ್ಲಿ ಉತ್ಪಾದನೆಗೊಂದ ಸಾಮಗ್ರಿಗಳನ್ನು ಹೊರದೇಶಕ್ಕೆ ರಫ್ತುಮಾಡಲು ಅಗತ್ಯವಾಗಿ ಬಂದರುಗಳು ಬೇಕು. ಕಡಿಮೆ ವೆಚ್ಚದಲ್ಲಿ ವಿದೇಶಕ್ಕೆ ಕಳುಹಿಸಬೇಕಾದರೆ ಬಂದರಿಗೆ ದೂರ ಆದರೆ ಸಾಗಾಣೆ ವೆಚ್ಚ ಹೆಚ್ಚಾಗುತ್ತದೆ. ಅದಕ್ಕಾಗಿ ಚೀನಾ ದೇಶದಲ್ಲಿ ಎಲ್ಲವನ್ನೂ ಸಮುದ್ರ ತೀರದಲ್ಲಿ ಮಾಡಿದ್ದಾರೆ. ಇದರಿಂದ ರಫ್ತಿಗೆ ತುಂಬಾ ಅನುಕೂಲ ಮತ್ತು ವೆಚ್ಚ ಕಡಿಮೆ. ನಮ್ಮಲ್ಲಿ ಈ ತರದ ಯಾವ ಚಿಂತನೆಯೂ ನಡೆದಿರುವುದಿಲ್ಲ. ಆದ್ದರಿಂದ ಒಂದು ಮಾಸ್ಟರ್ ಪ್ಲಾನ್ ರಚಿಸುವಂತಹ ಅಗತ್ಯವಿದೆಯೆಂದು ಮನಗಂಡಿತು. ಹಾಗೆಯೇ ಎಸ್ಇಝಡ್ ಒಳಗಡೆ ಕಾರ್ಮಿಕರು ವಾಸ ಮಾಡುವ ಹಾಗಿಲ್ಲ. ಕಾರ್ಮಿರು ಹೊರಗಡೆಯಿಂದ ಬರಬೇಕು. ಎಸ್ಇಝಡ್ ಒಳಗಡೆ ವಾಸಮಾಡುವವರು ಬಂಡವಾಳಗಾರರು ಮಾತ್ರ. ಹಾಗೆಯೇ ಪ್ರತಿ ಎಸ್ಇಝಡ್ ಕೂಡಾ ಪಬ್ಲಿಕ್ ಯುಟಿಲಿಟಿ ಅಂತ ಜಾಗ ಬಿಡುತ್ತಾರೆ. ಹಾಗೆ ಡಿಕ್ಲೇರ್ ಮಾಡುವಾಗ ಅಲ್ಲಿ ಯಾವ ಕಾರ್ಮಿಕ ಚಟುವಟಿಕೆ ನಡೆಯುವ ಹಾಗಿಲ್ಲ, ಲೇಬರ್ ಯೂನಿಯನ್ ಮಾಡುವ ಹಾಗಿಲ್ಲ. ಕಾರ್ಮಿಕನಿಗೆ ಅಪಘಾತವಾದರೆ ಅವನಿಗೆ ಕಡ್ಡಾಯವಾಗಿ ಪರಿಹಾರ ಕೋರುವ ಯಾವುದೇ ಪ್ರಸ್ತಾವ ಇಲ್ಲದಿರುವುದನ್ನು ಸಮಿತಿ ಗುರುತಿಸುತ್ತದೆ. ಈ ಎಲ್ಲವನ್ನೂ ಸರಿಪಡಿಸಿ ಜನಪರವಾದ ಒಂದು ಯೋಜನೆಯಾಗಿ ಮಾರ್ಪಡುವವರೆಗೆ ಎಸ್ಇಝಡ್‌ಗಳ ಮುಂದಿನ ಮಂಜೂರಾತಿಗಳನ್ನು ನಿಲ್ಲಿಸಿಬೇಕು ಎಂದು ಹೇಳಿ ೨೦೦೭ರಲ್ಲಿ ಪಾರ್ಲಿಮೆಂಟರಿ ಕಮಿಟಿ ವರದಿ ನೀಡಿತು. ಆದನ್ನು ಸರಿಪಡಿಸಿಕೊಳ್ಳದೆ ದೇಶದಲ್ಲಿ ಸಾಕಷ್ಟು ಎಸ್ಇಝಡ್‌ಗಳು ಮಂಜೂರಾತಿ ಪಡೆದುಕೊಂಡು ಕಾರ್ಯನಿರ್ವಹಿಸುತ್ತಿರುವುದು ಕಂಡು ಬರುತ್ತದೆ.

ನಂತರ ಪುನರ್ವಸತಿಗೆ ಬಂದರೆ ಅದು ಮತ್ತೊಂದು ವಿರೋಧಬಾಸ. ಉದಾಹರಣೆಗೆ ಮಧ್ಯ ಪ್ರದೇಶದ ಭೂಂಪಾಲೇಶ್ವರ್‌ನಲ್ಲಿ ನರ್ಮದಾ ನದಿಗೆ ಅಡ್ಡಲಾಗಿ ಒಂದು ಡ್ಯಾಂ ಕಟ್ಟುತ್ತಿದ್ದಾರೆ. ಕಟ್ಟುವ ಸಂದರ್ಭದಲ್ಲಿ ಆದ ಒಪ್ಪಂದವೆಂದರೆ ಈ ಕಡೆ ಡ್ಯಾಂ ಕೆಲಸ ಆಗುತ್ತಿರಬೇಕು, ಆ ಕಡೆ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸುವ ವ್ಯವಸ್ಥೆ ಎರಡೂ ನಿರಂತರವಾಗಿ ನಡಿತಾ ಇರಬೇಕು ಎಂದು. ಆದರೆ ಈಗ ಡ್ಯಾಂನ ಕೆಲಸ ಮುಗಿದಿದೆ. ಆದರೆ ಪುನರ್ವಸತಿ ಕೆಲಸ ಶೇ.೨೦ ರಷ್ಟೂ ಆಗಲಿಲ್ಲ. ಸರಕಾರದ ಪ್ರಕಾರ ಇಲ್ಲಿರುವ ಆದಿವಾಸಿಗಳಿಗೆ ಪುನರ್ವಸತಿ ಕಲ್ಪಿಸಲು ಅರಣ್ಯದಲ್ಲಿ ಜಮೀನು ನೀಡುವುದಕ್ಕೆ ಅರಣ್ಯ ಭೂಮಿ ಇಲ್ಲ ಎನ್ನುತ್ತಿದೆ. ನರ್ಮದಾ ಡ್ಯಾಂನಲ್ಲಿ ಇವತ್ತಿಗೂ ಕೂಡಾ ಪುನರ್ವಸತಿ ನೀತಿ ಅನುಸರಿಸಿಲ್ಲ. ಕೃಷಿ ಸಚಿವಾಲಯ ಹೇಳುವ ಪ್ರಕಾರ-ಪ್ರತಿ ಸಾವಿರ ಹೆಕ್ಟೇರ್ ಜಮೀನನ್ನು ಕೃಷಿಯಿಂದ ಕೃಷಿಯೇತರ ಉದ್ದೇಶಕ್ಕೆ ವರ್ಗಾವಣೆಯಾಗುವಾಗ ೬೦೦ ಕೃಷಿ ಕುಟುಂಬಗಳು ಹಾಗೂ ೭೫೦ ಭೂ ರಹಿತ ಕೃಷಿ ಕಾರ್ಮಿಕ ಕುಟುಂಬಗಳು ಬೀದಿಗೆ ಬರುತ್ತವೆ ಎಂದು. ಇದನ್ನು ಗಮನಿಸಿದರೆ ಈವರೆಗಿನ ನಮ್ಮ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜಮೀನು ವಶಪಡಿಸಿಕೊಂಡ ಎಷ್ಟು ಜನ ರೈತರು, ಕೃಷಿ ಕಾರ್ಮಿಕರು ಬೀದಿಗೆ ಬಂದಿವೆ ಎನ್ನುವುದನ್ನು ನಾವು

ಲೆಕ್ಕ ಮಾಡಬಹುದು.

ಈ ಎಲ್ಲ ಸಂಗತಿಗಳನ್ನು ಗಮನಿಸಿದರೆ ಎಸ್‌ಇಝಡ್‌ಗಳು ಮತ್ತು ಅದರ ಸಂಬಂಧ ನೀತಿ ಜನಪರವಾಗಿಲ್ಲ ಹಾಗೂ ಬಂಡವಾಳಶಾಹಿ ವಕ್ತಾರನಂತೆ ಕೆಲಸ ನಿರ್ವಹಿಸುತ್ತದೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು**


೧. ಆರಾಧನ ಅಗರವಾಲ್ 'ಸ್ಪೆಶಲ್ ಎಕನಾಮಿಕ್ ಝೋನ್: ರೀವಿಸಿಟಿಂಗ್ ದ ಪಾಲಸಿ ಡಿಬೇಟ್, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ – ೪೧(೪೩) ಜನವರಿ ೨೦೦೬

೨. ಸಿಪಿಆರ್ ಅಕೇಶನಲ್ ಪೇಪರ್ ಸೀರೀಸ್, 'ಸ್ಪೆಶಲ್ ಎಕನಾಮಿಕ್ ಝೋನ್ಸ್ ಪ್ರಾಮೈಸ್, ಪರ್‌ಫಾರ್ಮೆನ್ಸ್ ಅಂಡ್ ಪೆಂಡಿಂಗ್ ಇಶ್ಯುಸ್, ಸೆಂಟರ್ ಫಾರ್ ಪಾಲಿಸಿ ರೀಸರ್ಚ್, ನ್ಯೂಡೆಲ್ಲಿ, ಮಾರ್ಚ್ ೨೦೦೯

೩. ಚತುರ್ವೇದಿ, ತರುಣ್, ಗೈಡ್ಸ್ ಟು 'ಸ್ಪೆಶಲ್ ಎಕನಾಮಿಕ್ ಝೋನ್ಸ್, ಕಮರ್ಶಿಯಲ್ ಲಾ ಪಬ್ಲಿಷರ್ಸ್(ಇಂಡಿಯಾ), ದೆಹ್ಲಿ, ೨೦೦೭